೨) ಕಬಿನಿ ಅಣೆಕಟ್ಟು ವಿದ್ಯುದಾಗಾರ ಸ್ಥಾಪಿತ ಘಟಕ ಸಾಮರ್ಥ್ಯ ೧ × ೨೦:೨೦ ಮೆಗಾವಾಟ್ ವಾರ್ಷಿಕ ವಿದ್ಯುತ್ ಉತ್ಪಾದನೆ ೭೩ ಮಿ ಯು.

೩) ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರ ಸ್ಥಾಪಿತ ಘಟಕ ಸಾಮರ್ಥ್ಯ ೫ × ೫೦ : ೨೬೮
೧ × ೧೮ ಮೆಗಾವಾಟ್
ವಾರ್ಷಿಕ ವಿದ್ಯುತ್ ಉತ್ಪಾದನೆ ೭೧೪ ಮಿ ಯು

೪) ಕಟ್ಲಾ ಮತ್ತು ಪಲ್ನ ನೀರನ್ನು ಅಡ್ಡ ಹಾಯಿಸುವ ಯೋಜನೆ/ಉತ್ಪಾದಿಸಬಲ್ಲ ವಿದ್ಯುಚ್ಛಕ್ತಿ ೧೮೦ ಮಿ ಯು

೫) ಸರಪಾಡಿ ಅಣೆಕಟ್ಟು ಜಲ ವಿದ್ಯುತ್ ಯೋಜನೆ ಸ್ಥಾಪಿತ ಘಟಕ ಸಾಮರ್ಥ್ಯ ೩ × ೪೦:೧೨೦ ಮೆಗಾವಾಟ್ ವಾರ್ಷಿಕ ವಿದ್ಯುತ್ ಉತ್ಪಾದನೆ ೨೭೯ ಮಿ ಯು.

೮) ಶಾಖೋತ್ಪನ್ನ ವಿದ್ಯುತ್ ಯೋಜನೆಗಳು:
ರಾಯಚೂರು ಥರ್ಮಲ್ ವಿದ್ಯುತ್ ಸ್ಥಾವರ ೩ನೇ ಘಟಕ ೧ × ೨೧೦ ಮೆಗಾವಾಟ್.

೯) ಡೀಸಲ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು:

ಗ್ರಾಮೀಣ ಪ್ರದೇಶಗಳಲ್ಲಿ ಡೀಸಲ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವುದು ೭೭.೬ ಮೆಗಾವಾಟ್ ಉತ್ಪಾದನೆ ೪೬೦ ಮಿ ಯು.

೧೦) ಈ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಲಾಗುತ್ತಿದೆ.

ವಿದ್ಯುತ್ ದರ ಹೆಚ್ಚಿಸುವ ಬಗ್ಗೆ.

೧೫೯. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಈ ವರ್ಷ ವಿದ್ಯುತ್ ದರವನ್ನು ಹೆಚ್ಚಿಸುವ ಉದ್ದೇಶ ಹೊಂದಿದೆಯೇ,

೯) ಹಾಗಿದ್ದರೆ ವಿವರಗಳನ್ನು ನೀಡುವುದು.

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

೮) ಮತ್ತು ೯) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ದರ ಪರೀಕ್ಷಣಾ ಸಮಿತಿಯು ವರದಿಯನ್ನು ದಿನಾಂಕ ೭-೬ ೧೯೯೦ ರಂದು ಸರ್ಕಾರಕ್ಕೆ ತನ್ನ ಶಿಫಾರಸ್ಸುಗಳೊಡನೆ ಕಳುಹಿಸಿದ್ದು. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹೊರಡಿಸಿರುವ ನೋಟಿಫಿಕೇಶನ್‌ನಿಂದ ಸರಕಾರಕ್ಕೆ ಲಾಭ

೧೫೯. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹೊರಡಿಸಿರುವ ನೋಟಿಫಿಕೇಶನ್ ನಂ. ಸಿಐ ೩೦೪ ಎಂಆಸ್ಸ್ ೮೬, ಬೆಂಗಳೂರು ದಿನಾಂಕ ೭-೬-೯೦ ರಿಂದ ಸರ್ಕಾರಕ್ಕೆ ಆಗಿರುವ ಲಾಭವೆಷ್ಟು,

೯) ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಹೊರಡಿಸಿರುವ ಈ ನೋಟಿಫಿಕೇಶನ್‌ನಿಂದ ಸಣ್ಣ ಕ್ವಾರಿ ಉದ್ದಿಮೆದಾರರಿಗೆ ತೊಂದರೆಯಾಗಿರುವುದು ನಿಜವೇ.

೩) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕ್ವಾರಿಲೀಸ್ ನಿಯಮಗಳನ್ನು ಸಂಪೂರ್ಣ ಜಾರಿಗೊಳಿಸಲಾಗಿದೆಯೇ ?

ಶ್ರೀ ಬಿ. ಕಿಷಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು)—

೮) ತಿದ್ದುಪಡಿಯ ನಿಯಮಗಳ ಅಡಿಯಲ್ಲಿ ಇನ್ನೂ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.